# ಗೃಹಸ್ಥ ಧರ್ಮದಲ್ಲಿ ಗೀತೆಯ ಮಹತ್ವ

**ಡಾ. ವಿ. ಶ್ರೀಮತಿ**

ಮಾನವ ಜೀವನದ ಎಲ್ಲ ಮಜಲುಗಳಲ್ಲೂ ಉಪಯುಕ್ತವಾಗುವ, ಹಲವು ರೀತಿಯ ತತ್ತ್ವ, ಚಿಂತನೆ ಹಾಗೂ ಉಪದೇಶಗಳನ್ನೊಳಗೊಂಡ ಅಸಾಮಾನ್ಯ ಕೃತಿ ಗೀತೆ. ಇದರಲ್ಲಿ ಬರುವ ವಿಚಾರಗಳನ್ನು ಗೃಹಸ್ಥ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದೆಂದು ವಿವರಿಸಿರುವ ಲೇಖಕಿ, ಮೈಸೂರಿನಲ್ಲಿ ಸಂಸ್ಕೃತ ಉಪನ್ಯಾಸಕಿಯಾಗಿದ್ದಾರೆ. ಸಂಗೀತ, ಕಲೆ, ಶಾಸ್ತ್ರ, ಅಧ್ಯಾತ್ಮ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಕೊಂಡಿರುವ ಅವರು ಅನೇಕ ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ.

‘**ಮಾ**ನವ ಜನ್ಮ ದೊಡ್ಡದು, ಅದ ಹಾಳು ಮಾಡಬೇಡಿರೋ ಹುಚ್ಚಪ್ಪಗಳಿರಾ’ ಎಂದು ಪುರಂದರದಾಸರು ಸಾರಿದ್ದಾರೆ. ಅಸಂಖ್ಯ ಜೀವಕೋಟಿಗಳಿರುವ ಈ ಪ್ರಪಂಚದಲ್ಲಿ ಎಷ್ಟೋ ಜನ್ಮಗಳ ಪುಣ್ಯದ ಫಲದಿಂದ ಮಾನವ ಜನ್ಮ ಪ್ರಾಪ್ತವಾಗುತ್ತದೆ. ಹಾಗೆ ದೊರಕಿರುವ ಮಾನವ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವುದು ನಮ್ಮ ವಿವೇಚನೆಗೆ ಸೇರಿದ್ದು. ಈ ಮಾನವ ಜನ್ಮದಲ್ಲೂ ಅತ್ಯಂತ ಸಾರ್ಥಕವಾದ ಬದುಕೆಂದರೆ ಗೃಹಸ್ಥ ಧರ್ಮ. ‘**ಧನ್ಯೋ ಹಿ ಗೃಹಸ್ಥಾಶ್ರಮಃ**’ ಎಂದೇ ಗೃಹಸ್ಥ ಜೀವನವನ್ನು ಕೊಂಡಾಡಲಾಗಿದೆ. ನಮ್ಮ ಶ್ರುತಿ-ಸ್ಮೃತಿಗಳೂ ಸಹ ಗೃಹಸ್ಥಾಶ್ರಮದ ಮಹತ್ವವನ್ನು ಸಾರಿ ಹೇಳಿವೆ. ಸಕಲ ಉಪನಿಷತ್ತುಗಳ ಸಾರವಾದ ಭಗವದ್ಗೀತೆಯೂ ಗೃಹಸ್ಥನ ಸಾರ್ಥಕ ಬದುಕಿಗೆ ಅಗತ್ಯವಾದ ಅನೇಕ ಮಾರ್ಗದರ್ಶನವನ್ನು ಅತ್ಯಂತ ಸರಳವಾಗಿ ನೀಡಿದೆ.

ಅರ್ಜುನನನ್ನು ನಿಮಿತ್ತವಾಗಿರಿಸಿಕೊಂಡು ವಿಶ್ವಕಲ್ಯಾಣಕ್ಕಾಗಿ ಈ ಉಪದೇಶವಾಣಿಯನ್ನು ಭಗವಂತನು ನೀಡಿರುವನು. ಅರ್ಜುನನು ಕೇವಲ ಕ್ಷತ್ರಿಯ ಮಾತ್ರವಲ್ಲ. ಆತನೂ ಒಬ್ಬ ಗೃಹಸ್ಥ. ಹಾಗಾಗಿ ‘**ಯೋಗಕ್ಷೇಮಂ ವಹಾಮ್ಯಹಂ**’ ಎಂದು ಅರ್ಜುನನಿಗೆ ನೀಡಿದ ಅಭಯ ಸಮಸ್ತ ಗೃಹಸ್ಥರಿಗೂ ಅನ್ವಯಿಸುತ್ತದೆ. ಹೇಗೆ ಅರ್ಜುನನು ಭಗವಂತನ ಮಾತಿನಲ್ಲಿ ಸಂಪೂರ್ಣ ವಿಶ್ವಾಸವಿರಿಸಿ ಜಯಗಳಿಸಿದನೋ, ಸಂಕಷ್ಟದಿಂದ ಪಾರಾದನೋ, ಅದರಂತೆ ಭಗವಂತನು ತೋರಿದ ಮಾರ್ಗದಲ್ಲಿ ನಡೆಯುವ ಗೃಹಸ್ಥರೆಲ್ಲರೂ ಭವಬಂಧನದಿಂದ ಪಾರಾಗುವರು.

ಗೀತೆಯು ಅಧ್ಯಾತ್ಮವನ್ನು ಮಾತ್ರ ಬೋಧಿಸುವುದಿಲ್ಲ. ನಾವು ಯಾವ ರೀತಿಯ ಜೀವನವನ್ನು ಅನುಭವಿಸುತ್ತಿದ್ದೇವೆಯೋ ಆ ಜೀವನವನ್ನು ಮತ್ತಷ್ಟು ಉತ್ತಮಪಡಿಸಿಕೊಳ್ಳಲು ಬೇಕಾದ ಮಾರ್ಗದರ್ಶನವನ್ನು ನೀಡುತ್ತದೆ. ಸಂಸ್ಕಾರವನ್ನು ಬೆಳೆಸುತ್ತದೆ. ಆಲೋಚನಾ ಕ್ರಮವನ್ನು ಶುದ್ಧಪಡಿಸುತ್ತದೆ. ಗೀತೆಯನ್ನು ಮೋಕ್ಷ ಶಾಸ್ತ್ರವೆಂದೂ ಕರೆಯಲಾಗಿದೆ. ನಮ್ಮ ಪ್ರಾಚೀನ ಋಷಿವರೇಣ್ಯರ ಗುರಿ ಮೋಕ್ಷವೊಂದೇ ಆಗಿತ್ತು. ಆದರೆ ಈಗಿನ ಕಾಲದಲ್ಲಿ ಲೌಕಿಕ ಬದುಕಿನ ಹೊಣೆಯಿಂದಲೇ ಮಾನವ ತತ್ತರಿಸುತ್ತಿದ್ದಾನೆ. ವಿದ್ಯೆ, ಹಣ, ಅಧಿಕಾರ ಮುಂತಾಗಿ ನಾನಾ ಚಿಂತೆಗಳಿಂದ ನಲುಗುತ್ತಿರುವಾಗ ಮೋಕ್ಷಚಿಂತನೆಗೆ ವ್ಯವಧಾನವೆಲ್ಲಿದೆ? ಗೀತೆ ಮೋಕ್ಷಶಾಸ್ತ್ರವಾದರೂ ಲೌಕಿಕ ಜೀವನವನ್ನು ಕಡೆಗಣಿಸಿಲ್ಲ. ನಮಗೆ ದೊರಕಿರುವ ಜೀವನವನ್ನು ಸರಿಯಾದ ರೀತಿಯಲ್ಲಿ ನಡೆಸುವುದೇ ಧರ್ಮ. ಈ ಧರ್ಮ ಮಾರ್ಗವನ್ನು ತಿಳಿಸುತ್ತದೆ ಗೀತೆ. ಧರ್ಮವು ಮೋಕ್ಷಕ್ಕೆ ಪೂರಕವಾಗಿರುತ್ತದೆ.



ಎಲ್ಲರಿಗೂ ಮುಕ್ತಿಮಾರ್ಗವನ್ನು ತೋರಿಸುತ್ತದೆ ಗೀತೆ. ನಮ್ಮ ಅಹಂಭಾವವನ್ನು ಸಂಪೂರ್ಣ ತ್ಯಜಿಸಿ ಭಗವಂತನಿಗೆ ಶರಣಾದರೆ ನಮ್ಮನ್ನು ರಕ್ಷಿಸಲು ಸರ್ವದಾ ಸಿದ್ಧ ಆ ಪರಮಾತ್ಮ. ಅಂತಹ ಭಗವತ್ಕೃಪೆಯನ್ನು ಪಡೆಯುವ ಸುಲಭ ಮಾರ್ಗವನ್ನೂ ತೋರಿಸುತ್ತದೆ ಗೀತೆ.

ಗೃಹಸ್ಥನಿಗೆ ಮೋಹಪಾಶಗಳು ಅಧಿಕ. ಅನೇಕ ಜವಾಬ್ದಾರಿಗಳನ್ನು ನಿರ್ವಹಿಸಬೇಕಾದ ಕಾಲವದು. ಆದ್ದರಿಂದ ಗೊಂದಲಗಳೂ ಸಹಜ. ತಾನು ಮಾಡುತ್ತಿರುವ ಕಾರ್ಯಗಳು ಸರಿಯೋ ತಪ್ಪೋ ಎಂಬುದನ್ನೂ ಕೆಲವೊಮ್ಮೆ ನಿರ್ಣಯಿಸಲಾಗದಂತಹ ಸಂದಿಗ್ಧ ಪರಿಸ್ಥಿತಿ. ವ್ಯಾಮೋಹಗಳು ಬಲವಾಗಿ ಕಾಡುತ್ತಿರುತ್ತವೆ. ಇಂತಹ ಸಂದರ್ಭದಲ್ಲಿ ಸೂಕ್ತದಾರಿ ತೋರಬಲ್ಲ ಕೈದೀವಿಗೆ ಶ್ರೀಮದ್ಭಗವದ್ಗೀತೆ. ಮೋಹಪಾಶಕ್ಕೆ ಸಿಲುಕಿದರೆ ಎಂತಹ ಅನರ್ಥವುಂಟಾಗುತ್ತದೆ ಎಂಬುದಕ್ಕೆ ಧೃತರಾಷ್ಟ್ರನೇ ಪ್ರತ್ಯಕ್ಷ ಸಾಕ್ಷಿ. ತನ್ನ ಮಕ್ಕಳು ಅದರಲ್ಲೂ ವಿಶೇಷವಾಗಿ ದುರ್ಯೋಧನ ಮಾಡುತ್ತಿರುವುದು ತಪ್ಪೆಂದು ಆತನಿಗೆ ತಿಳಿದಿದೆ. ವ್ಯಾಸ, ವಿದುರ ಮುಂತಾದವರೂ ಅದನ್ನು ತಿಳಿಸಿ ಹೇಳಿದ್ದಾರೆ. ಆದರೂ ತನ್ನ ಮಕ್ಕಳನ್ನು ಸನ್ಮಾರ್ಗಕ್ಕೆ ತರಲು ಅವನು ಪ್ರಯತ್ನಿಸಲಿಲ್ಲ. ಪುತ್ರವ್ಯಾಮೋಹ ಆತನ ಅಂತಃಚಕ್ಷುವನ್ನೂ ಕುರುಡಾಗಿಸಿತು. ಆತನ ಕಣ್ಣೆದುರೇ ಸಕಲ ಪುತ್ರರೂ ವಿನಾಶವಾದರು. ಇದು ಲೌಕಿಕ ಗೃಹಸ್ಥರೆಲ್ಲರಿಗೂ ಮಹತ್ತರವಾದ ಸಂದೇಶವನ್ನು ತಿಳಿಸುತ್ತದೆ. ವ್ಯಾಮೋಹಕ್ಕೊಳಗಾಗದೆ ಧರ್ಮಮಾರ್ಗದಲ್ಲಿ ನಡೆಯಬೇಕೆಂಬ ಸಾರ್ವಕಾಲಿಕ ಸತ್ಯದ ಮನವರಿಕೆಯುಂಟಾಗುವಂತೆ ಪ್ರೇರೇಪಿಸುತ್ತದೆ. **ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ** ಎನ್ನುವನು ಭಗವಂತ. ಈ ಹೃದಯ ದೌರ್ಬಲ್ಯ ನಮ್ಮೆಲ್ಲ ಧರ್ಮಾಧರ್ಮ ವಿವೇಚನೆಯನ್ನೇ ಕಳೆದುಬಿಡುತ್ತದೆ. ಮಾನಸಿಕ ಶಕ್ತಿ ಕುಗ್ಗಿದರೆ ಏನನ್ನೂ ಮಾಡಲು ಸಾಧ್ಯವಿಲ್ಲವೆಂಬ ಪರಿಸ್ಥಿತಿಯುಂಟಾಗುತ್ತದೆ. ಗೃಹಸ್ಥರು ತಮ್ಮ ಮಕ್ಕಳಿಗೆ ಬಾಲ್ಯದಿಂದಲೇ ಈ ಹೃದಯ ದೌರ್ಬಲ್ಯವನ್ನು ಮೆಟ್ಟಿನಿಲ್ಲುವಂತಹ ಸೂಕ್ತ ಮಾರ್ಗದರ್ಶನವನ್ನು ನೀಡಬೇಕಾಗಿರುವುದು ಇಂದಿನ ಅಗತ್ಯವೇ ಆಗಿದೆ.

ಕರ್ಮಸಿದ್ಧಾಂತವನ್ನು ಅತ್ಯಂತ ಸೂಕ್ತವಾಗಿ ಪ್ರತಿಪಾದಿಸುತ್ತದೆ ಗೀತೆ. ಗೃಹಸ್ಥ ಜೀವನಕ್ಕೆ ಮೂಲಭೂತವಾಗಿರುವುದೇ ಈ ಕರ್ಮ.

**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ ।**
**ಮಾ ಕರ್ಮ ಫಲಹೇತುರ್ಭೂರ್ಮಾ ತೇ ಸಂಗೋಽಸ್ತ್ವಕರ್ಮಣಿ ॥**

*(ಗೀತೆ, ೨.೪೭)*

'ಕರ್ಮ ಮಾಡುವುದರಲ್ಲಿ ಮಾತ್ರ ನಿನಗೆ ಅಧಿಕಾರ. ಕರ್ಮಫಲದಲ್ಲಿ ಆಸಕ್ತಿಯನ್ನು ಹೊಂದಿರಬೇಡ. ಫಲದ ಆಸಕ್ತಿಯಿಂದ ಎಂದೂ ಕರ್ಮವನ್ನಾಚರಿಸಬೇಡ. ಕರ್ಮಗಳನ್ನು ಬಿಡುವ ಅಧಿಕಾರವೂ ನಿನಗಿಲ್ಲ.'

ಇದು ಗೀತೆ ನೀಡುವ ಮಹೋನ್ನತ ಉಪದೇಶಗಳಲ್ಲೊಂದಾಗಿದೆ. ಗೃಹಸ್ಥನಾದವನು ಈ ಮಾತನ್ನು ಸರಿಯಾಗಿ ಅರ್ಥೈಸಿಕೊಂಡು ಅದನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡರೆ ಆತನು ಅತ್ಯಂತ ಸುಖವಾಗಿ, ನೆಮ್ಮದಿಯಾಗಿ ಬದುಕಬಲ್ಲ.

ಗೃಹಸ್ಥನಾದವನಿಗೆ ಅನೇಕ ಕರ್ತವ್ಯಗಳನ್ನು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಅವುಗಳನ್ನಾಚರಿಸಬೇಕಾದರೆ ಆತನ ಮನಃಸ್ಥಿತಿ ಹೇಗಿರಬೇಕೆಂದು ಗೀತೆಯು ತಿಳಿಸುತ್ತದೆ. ವಿಹಿತ ಕರ್ಮಗಳೆಲ್ಲವನ್ನೂ ಗೃಹಸ್ಥನು ಆಚರಿಸಬೇಕು. ಆದರೆ ಆ ಕರ್ಮಗಳ ಫಲದ ನಿರೀಕ್ಷೆ ಇರಬಾರದು. ಇಂದಿನ ಆಧುನಿಕ ಯುಗದಲ್ಲಿ ಮಕ್ಕಳನ್ನು ಸಲಹುವುದು, ಅವರಿಗೆ ಯೋಗ್ಯ ವಿದ್ಯಾಭ್ಯಾಸವನ್ನು ನೀಡುವುದಷ್ಟೇ ತಂದೆ-ತಾಯಿಯರ ಕರ್ತವ್ಯ; ಮಕ್ಕಳಿಂದ ಏನನ್ನೂ ನಿರೀಕ್ಷಿಸಬಾರದು ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಮಕ್ಕಳಿಂದ ಅನೇಕ ನಿರೀಕ್ಷೆಗಳನ್ನಿಟ್ಟುಕೊಂಡು ಅವು ಈಡೇರದಿದ್ದಾಗ ಮಾನಸಿಕ ಆಘಾತಕ್ಕೊಳಗಾಗುವುದಕ್ಕೆ ಬದಲಾಗಿ ಗೀತೆಯ ಈ ಶ್ಲೋಕವನ್ನು ಮನನ ಮಾಡಿಕೊಂಡು ತಮ್ಮ ಕರ್ತವ್ಯದಲ್ಲಿ ತೊಡಗಿದರೆ ಮಾತಾ-ಪಿತೃಗಳಿಗೆ ಮಾನಸಿಕ ಸ್ಥೈರ್ಯವುಂಟಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಮಾಡುವ ಕೆಲಸದಲ್ಲಿ ನಿಷ್ಠೆ-ಶ್ರದ್ಧೆಯನ್ನಂತೂ ಇದು ಎಂದೂ ಕಡಿಮೆ ಮಾಡುವುದಿಲ್ಲ.

ಗೃಹಸ್ಥರಿಗೆ ಸಾಮಾನ್ಯವಾಗಿ ತನ್ನ ಕುಟುಂಬ ಅದರಲ್ಲೂ ವಿಶೇಷವಾಗಿ ಪುತ್ರರ ವಿಷಯದಲ್ಲಿ ಅಧಿಕ ಪ್ರೀತಿ. ಇದು ವ್ಯಾಮೋಹವಾಗಿ ಬುದ್ಧಿಯನ್ನು ಮಂಕುಗೊಳಿಸುವ ಹಂತಕ್ಕೂ ಬೆಳೆಯುತ್ತದೆ. ಪುತ್ರವಿಯೋಗವಾದರಂತೂ ತಂದೆತಾಯಿಯರ ಶೋಕ ವರ್ಣಿಸಲಸದಳ. ಅಂತಹ ಸಂದರ್ಭದಲ್ಲಿ ಆಸರೆಯನ್ನು ನೀಡುವುದೇ ಗೀತೆ.

**ಜಾತಸ್ಯ ಹಿ ಧ್ರುವೋ ಮೃತ್ಯು ಧ್ರುವಂ ಜನ್ಮ ಮೃತಸ್ಯ ಚ ।**
**ತಸ್ಮಾದಪರಿಹಾರ್ಯೇಽರ್ಥೇ ನ ತ್ವಂ ಶೋಚಿತುಮರ್ಹಸಿ ॥**

*(೨-೨೭)*

'ಹುಟ್ಟಿದವನಿಗೆ ಸಾವು ನಿಶ್ಚಯ. ಮರಣ ಹೊಂದಿದವನು ಪುನಃ ಜನಿಸುತ್ತಾನೆ. ತಪ್ಪಿಸಲು ಸಾಧ್ಯವಿಲ್ಲದ ಈ ವಿಷಯದಲ್ಲಿ ಚಿಂತೆ ಮಾಡುವುದು ಯುಕ್ತವಲ್ಲ.'

ದುಃಖವನ್ನು ತಡೆಯುವ, ಮಾನಸಿಕ ಸ್ಥೈರ್ಯವನ್ನು ವರ್ಧಿಸುವ ಇಂತಹ ಮಾತುಗಳೇ ಗೃಹಸ್ಥನಿಗೆ ಸೂಕ್ತ ಮಾರ್ಗದರ್ಶನವನ್ನು ನೀಡಿ ಅವಲಂಬನೆಯನ್ನು ನೀಡುವುದು. ದುಃಖದ ಪರಿಸ್ಥಿತಿಯಲ್ಲೂ ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳಲು ಗೀತೆಯೇ ಆಸರೆಯಾಗುತ್ತದೆ. ಗೃಹಸ್ಥನ ಜೀವನದಲ್ಲಿ ಭಾವನೆಗಳ ಏರಿಳಿತಗಳನ್ನು ನಿಯಂತ್ರಿಸುವುದು ಕಷ್ಟಸಾಧ್ಯ. ನಮ್ಮ ಬುದ್ಧಿಯನ್ನು ನಿಯಂತ್ರಿಸಲಾರದೆ ಕ್ರೋಧವಶರಾದರೆ ಆಗುವ ಪರಿಣಾಮವನ್ನು ಗೀತೆಯು ಈ ರೀತಿ ತಿಳಿಸುತ್ತದೆ.

**ಕ್ರೋಧಾದ್ಭವತಿ ಸಮ್ಮೋಹಃ ಸಮ್ಮೋಹಾತ್ ಸ್ಮೃತಿವಿಭ್ರಮಃ ।**
**ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥**

*(೨-೬೩)*

'ಕ್ರೋಧದಿಂದ ಅವಿವೇಕವುಂಟಾಗುತ್ತದೆ. ಅವಿವೇಕದಿಂದ ಮತಿಭ್ರಮೆಯಾಗುತ್ತದೆ. ಅದರಿಂದ ಬುದ್ಧಿನಾಶವಾಗುತ್ತದೆ. ಬುದ್ಧಿನಾಶದಿಂದ ಸರ್ವನಾಶ.'

ಕ್ರೋಧವಶನಾದವನು ದೈಹಿಕ ಹಾಗೂ ಮಾನಸಿಕ ಒತ್ತಡಗಳಿಗೆ ಸಿಲುಕುತ್ತಾನೆ. ಸಾಮಾಜಿಕವಾಗಿಯೂ ನಿಂದನೆಗೊಳಗಾಗುತ್ತಾನೆ. ಆರ್ಥಿಕವಾಗಿಯೂ ದುರ್ಬಲನಾಗಬಹುದು. ಹಾಗಾಗಿ ಸರ್ವನಾಶಕ್ಕೆ ಕಾರಣವಾದ ಕ್ರೋಧದಿಂದ ಪಾರಾಗಬೇಕು ಎಂಬ ತಿಳಿವಳಿಕೆಯನ್ನು ಮೂಡಿಸುತ್ತದೆ ಗೀತೆ.

ಎಂತಹ ಪರಿಸ್ಥಿತಿಯಲ್ಲೂ ನಮ್ಮ ಕರ್ಮಗಳನ್ನು ತ್ಯಜಿಸಬಾರದು ಎಂಬ ಸಾಮಾಜಿಕ ಪ್ರಜ್ಞೆಯನ್ನೂ ಮೂಡಿಸುತ್ತದೆ ಗೀತೆ.

**ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।**
**ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈರ್ಗುಣೈಃ ॥**

*(೩-೫)*

'ಕ್ಷಣಮಾತ್ರವೂ ಕರ್ಮವನ್ನು ಮಾಡದೆ ಯಾರೂ ಇರಲಾರರು. ಪ್ರಕೃತಿಜನ್ಯಗಳಾದ ಗುಣಗಳಿಗೆ ವಶರಾಗಿ ಪ್ರತಿಯೊಬ್ಬರೂ ಕರ್ಮಗಳನ್ನು ಮಾಡುತ್ತಲೇ ಇರುತ್ತಾರೆ.'

ಎಂದೂ ಆಲಸ್ಯವನ್ನು ಹೊಂದಿರಬಾರದು. ತಾನು ಮಾಡುವ ಕೆಲಸಗಳಲ್ಲಿ ಶ್ರದ್ಧೆ ಆಸಕ್ತಿಗಳು ತುಂಬಿರಬೇಕು ಎಂಬ ಅಂಶ ಮನದಟ್ಟಾಗಲು ಇಂತಹ ಶ್ಲೋಕಗಳು ನೆರವಾಗುತ್ತವೆ.

ಒಂದು ಸಮಾಜ ಸುವ್ಯವಸ್ಥಿತವಾಗಿ ಮುನ್ನಡೆಯಬೇಕಾದರೆ ಪರಸ್ಪರ ಸಹಕಾರ, ಅವಲಂಬನೆ ಅತ್ಯಗತ್ಯ. ಈ ಸಹಕಾರ ತತ್ತ್ವವನ್ನು ಗೀತೆಯು ಅಷ್ಟು ಪ್ರಾಚೀನ ಕಾಲದಲ್ಲೇ ಬೋಧಿಸಿದೆ.

**ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ ।**
**ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ ॥**

*(೩-೧೧)*

'ನೀವು ಯಜ್ಞಗಳಿಂದ ದೇವತೆಗಳನ್ನು ತೃಪ್ತಿಪಡಿಸಿರಿ. ಆ ದೇವತೆಗಳು ನಿಮ್ಮನ್ನು ಉನ್ನತಿಗೊಯ್ಯಲಿ. ಹೀಗೆ ನಿಸ್ವಾರ್ಥದಿಂದ ಪರಸ್ಪರ ತೃಪ್ತಿಯನ್ನು ಹೊಂದಿ ನೀವು ಪರಮ ಶ್ರೇಯಸ್ಸನ್ನು ಹೊಂದಿರಿ.'

ಯಾವುದೇ ವ್ಯಕ್ತಿ ಮತ್ತೊಬ್ಬರ ಸಹಕಾರವಿಲ್ಲದೆ ಸಮಾಜದಲ್ಲಿ ಬದುಕಲಾರ. ಹಾಗೆಯೇ ಗೃಹಸ್ಥನೂ ಎಂದೂ ಕೇವಲ ತನಗಾಗಿ ಎಂದು ದುಡಿಯುವುದಿಲ್ಲ. ತನ್ನ ಕುಟುಂಬಕ್ಕಾಗಿ ತನ್ನ ದುಡಿಮೆ ಎನ್ನುತ್ತಾನೆ. ಹಾಗೆಯೇ ತನ್ನ ನೆರೆಹೊರೆ, ಆಶ್ರಿತರು, ಸ್ನೇಹಿತರು, ಬಾಂಧವರು ಹೀಗೆ ಹಲವರ ಯೋಗಕ್ಷೇಮದ ದೃಷ್ಟಿಯನ್ನೂ ಹೊಂದಿರಬೇಕು. ಸಮಾಜದ ಋಣವನ್ನು ತೀರಿಸುವ ಮಾರ್ಗವೂ ಇದೇ. ಗೃಹಸ್ಥನಾದವನು, ಮಾಡಿದ ಅಡುಗೆಯನ್ನು ದೇವರಿಗೆ ಸಮರ್ಪಿಸಬೇಕು. ಹಸಿದು ಬಂದವರನ್ನು ಸತ್ಕರಿಸಬೇಕು. ಅನಂತರ ತಾನು ಊಟ ಮಾಡಬೇಕು. ತಾನೊಬ್ಬನೇ ಊಟಮಾಡುವವನನ್ನು ಪಾಪಿ ಎಂದು ಕರೆಯುತ್ತಿದ್ದರು. **ಅತಿಥಿ ದೇವೋ ಭವ** ಎಂಬ ನಮ್ಮ ಪ್ರಾಚೀನ ಸಂಸ್ಕೃತಿಯ ಭಾವ ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಗೃಹಸ್ಥನ ಕರ್ತವ್ಯಗಳನ್ನು ಅತ್ಯಂತ ಸರಳವಾಗಿ ಗೀತೆಯು ಈ ರೀತಿ ತಿಳಿಸಿದೆ. ಇದು ಎಲ್ಲಾ ಕಾಲಕ್ಕೂ ಸಲ್ಲುವಂತಹ ಉಪದೇಶವಾಣಿ.

ಹಂಚಿಕೊಳ್ಳುವಿಕೆ ಎಂಬ ಭಾವನೆ ಇರುವವರಲ್ಲಿ ಸ್ವಾರ್ಥ ಕಂಡುಬರುವುದಿಲ್ಲ. ಚಿಕ್ಕ ಮಕ್ಕಳಲ್ಲಿ ಇಂತಹ ಉದಾತ್ತ ಭಾವನೆಗಳನ್ನು ಬೆಳೆಸಬೇಕಾದ ಜವಾಬ್ದಾರಿ ಪ್ರತಿಯೊಬ್ಬ ಪೋಷಕರದಾಗಿರುತ್ತದೆ. ಈ ಅಗತ್ಯ ಹಿಂದಿಗಿಂತಲೂ ಈಗ ಹೆಚ್ಚಾಗಿದೆ. ಸ್ವಾರ್ಥ ಹಾಗೂ ಸಂಕುಚಿತ ಭಾವನೆ ಈಗ ಎಲ್ಲೆಲ್ಲೂ ವ್ಯಾಪಿಸುತ್ತಿದೆ. ಇದರಿಂದ ಪಾರಾಗಲು **ಲೋಕಾಃ ಸಮಸ್ತಾಃ ಸುಖಿನೋ ಭವಂತು** ಎಂಬ ನಮ್ಮ ಪ್ರಾಚೀನರ ಉದಾತ್ತ ಭಾವನೆಯನ್ನು ಸರ್ವದಾ ಸ್ಮರಿಸುತ್ತಾ ಅದನ್ನು ಆಚರಣೆಯಲ್ಲಿ ತರಬೇಕು. ಪರಸ್ಪರ ಅವಲಂಬನೆಯಿಂದ ನಾವು ಜೀವಿಸುತ್ತಿದ್ದೇವೆ ಎಂಬ ಸತ್ಯ ಅರಿವಾದರೆ ಸ್ವಾರ್ಥ, ದ್ವೇಷ, ದುರಾಸೆ, ಅಹಂಕಾರಗಳಿಂದ ನಾವು ಪಾರಾಗಬಹುದು. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?' ಎಂಬ ಗಾದೆಯಂತೆ ಚಿಕ್ಕಮಕ್ಕಳಲ್ಲಿ ಈ ಭಾವನೆಗಳು ಬೆಳೆಯದಿದ್ದರೆ ಮುಂದೆ ಅದು ಅವರಿಗೆ ಅರ್ಥವೇ ಆಗಲಾರದು. ಈ ನಿಟ್ಟಿನಲ್ಲಿ ಗೃಹಸ್ಥರ ಪಾತ್ರ ಅತ್ಯಂತ ಮಹತ್ವವೆನಿಸುತ್ತದೆ. ತಂದೆತಾಯಿಯರು ಸದ್ಭಾವವನ್ನು ಹೊಂದಿ ಸನ್ನಡತೆಯನ್ನು ರೂಢಿಸಿಕೊಂಡರೆ ಅಂತಹವರ ಮಕ್ಕಳೂ ಅದನ್ನೇ ಅನುಸರಿಸುತ್ತಾರೆ. ಇಂತಹ ಸದ್ಬೋಧೆಯನ್ನು ಗೀತೆಯು ನಮಗೆ ನೀಡಿದೆ.

**ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ ।**
**ಸ ಯತ್ ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥**

*(೩-೨೧)*

'ಶ್ರೇಷ್ಠರು ಯಾವುದನ್ನು ಆಚರಿಸುತ್ತಾರೋ ಅದನ್ನೇ ಇತರರು ಅನುಸರಿಸುತ್ತಾರೆ. ಅವರಿಗೆ ಆದರ್ಶವಾದುದನ್ನೇ ಲೋಕದ ಇತರರೂ ಸ್ವೀಕರಿಸುತ್ತಾರೆ.'

ಚಿಕ್ಕ ಮಕ್ಕಳಿಗೆ ತಮ್ಮ ತಂದೆತಾಯಿಯರೇ ಶ್ರೇಷ್ಠರು. ಅವರ ಆಚರಣೆಯನ್ನೇ ಮಕ್ಕಳು ಅನುಸರಿಸುತ್ತಾರೆ. ಹಾಗಾಗಿ ಒಂದು ಕುಟುಂಬದಲ್ಲಿ ಹಿರಿಯರ ಪಾತ್ರ ಅತ್ಯಂತ ಮಹತ್ವದ್ದು. ಅವರ ನಡೆ ನುಡಿ ವ್ಯವಹಾರಗಳೆಲ್ಲವನ್ನೂ ಗಮನಿಸುವ ಮಕ್ಕಳು ತಮಗರಿವಿಲ್ಲದೆ ಅದರಂತೆಯೇ ರೂಪುಗೊಳ್ಳುತ್ತಾರೆ. ಹಾಗಾಗಿ ಇಂದಿನ ಮಕ್ಕಳು ದಾರಿತಪ್ಪುತ್ತಿದ್ದಾರೆ, ನಮ್ಮ ಸಂಸ್ಕೃತಿಯನ್ನು ಮರೆಯುತ್ತಿದ್ದಾರೆ, ದುಷ್ಟರಾಗುತ್ತಿದ್ದಾರೆ ಎಂದು ಅವರನ್ನು ದೂರುವುದಕ್ಕೆ ಬದಲಾಗಿ ಅವರು ಎಂತಹ ವಾತಾವರಣದಲ್ಲಿ ಬೆಳೆಯುತ್ತಿದ್ದಾರೆ, ಎಂತಹ ಸಂಸ್ಕಾರ ಅವರಿಗೆ ದೊರೆಯುತ್ತಿದೆ ಎಂಬುದನ್ನು ಚಿಂತಿಸಬೇಕಾದ ಅಗತ್ಯವಿದೆ. ಏಕೆಂದರೆ ಗೀತೆ ಕೇವಲ ಅಧ್ಯಾತ್ಮ ಚಿಂತನೆಯನ್ನು ಮಾಡುವುದಿಲ್ಲ. ಅದ್ಭುತ ಮನಃಶಾಸ್ತ್ರವೂ ಇದರಲ್ಲಡಗಿದೆ. ಸಮಾಜದ ಹಿತಚಿಂತನೆಯನ್ನೂ ಇದು ಒಳಗೊಂಡಿದೆ. ಅತ್ಯಂತ ಸೂಕ್ಷ್ಮ ವಿಚಾರಗಳಲ್ಲೂ ನಮ್ಮ ಕಣ್ತೆರೆಸುವ ಕಾರ್ಯವನ್ನು ಗೀತೆಯು ಮಾಡಿದೆ.

ಎಂತಹ ಪರಿಸ್ಥಿತಿಯಲ್ಲೂ ನಮ್ಮ ಕರ್ಮಗಳನ್ನು ತ್ಯಜಿಸಬಾರದು ಎಂಬ ಸಾಮಾಜಿಕ ಪ್ರಜ್ಞೆಯನ್ನೂ ಮೂಡಿಸುತ್ತದೆ ಗೀತೆ. ಗೃಹಸ್ಥನು ಎಂದೂ ಆಲಸ್ಯವನ್ನು ಹೊಂದಿರಬಾರದು. ತಾನು ಮಾಡುವ ಕೆಲಸಗಳಲ್ಲಿ ಶ್ರದ್ಧೆ-ಆಸಕ್ತಿಗಳು ತುಂಬಿರಬೇಕು ಎಂಬ ಅಂಶ ಮನದಟ್ಟಾಗಲು ಇಂತಹ ಶ್ಲೋಕಗಳು ನೆರವಾಗುತ್ತವೆ.

**ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತಾ ಜನಕಾದಯಃ ।**
**ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥**

*(೩-೨೦)*

'ಜನಕರಾಜನೇ ಮೊದಲಾದವರು ಕರ್ಮಯೋಗದಿಂದಲೇ ಮೋಕ್ಷವನ್ನು ಪಡೆದುಕೊಂಡರು. ಲೋಕಕಲ್ಯಾಣದ ದೃಷ್ಟಿಯಿಂದ ನೀನು ಕರ್ಮವನ್ನು ಮಾಡುವುದು ಯುಕ್ತವಾಗಿದೆ.'

ಗೃಹಸ್ಥನಾಗಿ ಶ್ರೇಷ್ಠತ್ವವನ್ನು ಪಡೆದವರಲ್ಲಿ ಜನಕ ಮಹಾರಾಜ ಅತ್ಯಂತ ಪ್ರಮುಖ. 'ನನಗೆ ಅನೇಕ ಲೌಕಿಕ ಜವಾಬ್ದಾರಿಗಳಿವೆ. ಸಾಧನೆ ಮಾಡಲು ನನಗೆ ಸಮಯವಿಲ್ಲ' ಎನ್ನುವ ಡಂಬಾಚಾರಿಗಳಿಗೆ ಇದೊಂದು ಉತ್ತಮ ನಿದರ್ಶನವಾಗಬಲ್ಲದು. ದೇಶವನ್ನಾಳುವ ದೊರೆ, ಗೃಹಸ್ಥ. ತನ್ನ ಪ್ರಜೆಗಳೆಲ್ಲರ ಯೋಗಕ್ಷೇಮದ ಚಿಂತನೆ, ಶತ್ರುಗಳ ದಾಳಿಯನ್ನು ಹಿಮ್ಮೆಟ್ಟಿಸಲು ಸರ್ವದಾ ಸನ್ನದ್ಧ, ಯಜ್ಞಯಾಗಾದಿಗಳಲ್ಲಿ ನಿರತ, ಸಾಧುಸಂತರ ಸೇವೆ, ಶಾಸ್ತ್ರಾದಿ ವಿಚಾರ, ರಾಜ್ಯಭಾರದ ಕರ್ತವ್ಯ ನಿರ್ವಹಣೆ ಹೀಗೆ ಪ್ರತಿಕ್ಷಣವೂ ಕರ್ತವ್ಯ ನಿರತನಾಗಿದ್ದರೂ ಜನಕ ಮಹಾರಾಜ ಪರಮಜ್ಞಾನಿ. ಅಧ್ಯಾತ್ಮದ ಸಂಪೂರ್ಣ ಜ್ಞಾನವನ್ನು ಪಡೆದವನು. ನಿರ್ಲಿಪ್ತನಾಗಿ ತನ್ನ ಕರ್ತವ್ಯದಲ್ಲಿ ತೊಡಗಿರುವನು. ಒಬ್ಬ ಗೃಹಸ್ಥ ಏನೆಲ್ಲ ಸಾಧಿಸಬಹುದು ಎನ್ನುವುದಕ್ಕೆ ಇದಕ್ಕಿಂತ ಉತ್ತಮ ನಿದರ್ಶನ ಬೇಕೆ? ಇಂತಹ ಉದಾಹರಣೆಗಳನ್ನು ನೀಡುವುದರ ಮೂಲಕ ಶ್ರೀಕೃಷ್ಣ ಲೋಕದ ಸಮಸ್ತ ಗೃಹಸ್ಥರಿಗೂ ಸಾಧನೆಯ ಮಾರ್ಗವನ್ನು ತೋರುತ್ತಿರುವನು. ನನ್ನಿಂದೇನಾಗಬಲ್ಲದು ಎನ್ನುವವರಿಗೆ 'ಮನಸ್ಸಿದ್ದರೆ ಏನನ್ನು ಬೇಕಾದರೂ ಸಾಧಿಸಬಹುದು' ಎಂಬ ನಂಬಿಕೆ, ಆತ್ಮವಿಶ್ವಾಸಗಳನ್ನು ಮೂಡಿಸಲು ಇಂತಹ ಮಾತುಗಳು ನೆರವಾಗುತ್ತವೆ.

ಇಂದಿನ ಗಡಿಬಿಡಿಯ ಜೀವನದಲ್ಲಿ ಯಾರಿಗೂ ಯಾವುದಕ್ಕೂ ವ್ಯವಧಾನವೇ ಇರುವುದಿಲ್ಲ. ಹಾಗಿರುವಾಗ ಭಗವಂತನ ಶ್ರೇಷ್ಠತೆ, ಮಹಿಮೆಗಳನ್ನರಿತು ಆತನನ್ನು ಧ್ಯಾನಿಸುವುದಕ್ಕೆ ನಮಗೆ ಸಮಯವೇ ಸಾಲುವುದಿಲ್ಲ ಎನ್ನುವಂತಾಗಿದೆ. ಮಾನವನ ಈ ಸ್ವಭಾವವನ್ನು ಬಲ್ಲ ಪರಮಾತ್ಮನು ಅತ್ಯಂತ ಸುಲಭ ಮಾರ್ಗವನ್ನು ನಮಗೆ ಉಪದೇಶಿಸಿರುವನು.

''ನನ್ನಲ್ಲಿ ಮನಸ್ಸು ಹಾಗೂ ಬುದ್ಧಿಯನ್ನಿಡು. ಅದು ಸಾಧ್ಯವಾಗದಿದ್ದರೆ ಅಭ್ಯಾಸದಿಂದ ನನ್ನನ್ನು ಪಡೆಯಲು ಪ್ರಯತ್ನಿಸು. ಅದೂ ಸಾಧ್ಯವಾಗದಿದ್ದರೆ ನನಗೆ ಪ್ರಿಯವಾದ ಕರ್ಮಗಳನ್ನಾಚರಿಸು. ಅದೂ ಸಾಧ್ಯವಿಲ್ಲವಾದರೆ ನನಗೆ ಸಂಪೂರ್ಣ ಶರಣಾಗಿ ನೀನು ಮಾಡುವ ಸಮಸ್ತ ಕರ್ಮಗಳ ಫಲವನ್ನೂ ನನಗೆ ಅರ್ಪಿಸು.''

— ಇದಕ್ಕಿಂತ ಸುಲಭ ಮಾರ್ಗ ಎಲ್ಲಾದರೂ ದೊರೆಯಲು ಸಾಧ್ಯವೆ? ನಾವು ಎಂತಹ ಜವಾಬ್ದಾರಿಯನ್ನೇ ನಿರ್ವಹಿಸುತ್ತಿರಲಿ, ಕಾರ್ಯಒತ್ತಡದಲ್ಲಿ ಸಿಲುಕಿರಲಿ, ಭಗವಂತನಿಗೆ ಶರಣಾಗಿ ಕರ್ಮಫಲಗಳನ್ನು ಆತನಿಗೆ ಅರ್ಪಿಸುವುದು ಅತ್ಯಂತ ಸುಲಭ. ಎಂತಹ ಪರಿಸ್ಥಿತಿಯಲ್ಲೇ ಇದ್ದರೂ ಭಗವಂತನಲ್ಲಿ ಭಕ್ತಿಯನ್ನಿಡಲು ಯಾವುದೂ ಅಡ್ಡಿಯಾಗುವುದಿಲ್ಲ. ಅದು ಕವಚದಂತೆ ನಮ್ಮನ್ನು ಸಂರಕ್ಷಿಸುತ್ತದೆ. ಮನಸ್ಸಿನ ಭಾವನೆಯನ್ನು ಹಿಡಿದಿಡಲು ನೆರವಾಗುತ್ತದೆ. ಮಾನಸಿಕ ಸ್ಥೈರ್ಯವನ್ನುಂಟುಮಾಡುತ್ತದೆ. ಗೃಹಸ್ಥನು ತಾನು ಮಾಡುವ ಕಾರ್ಯಗಳಲ್ಲಿ ಸಫಲತೆಯನ್ನು ಪಡೆಯಲು, ಯಶಸ್ಸು ಹಾಗೂ ತೃಪ್ತಿಯನ್ನು ಹೊಂದಲು ಈ ರೀತಿಯ ಶರಣಾಗತಿ ಅತ್ಯಂತ ಆವಶ್ಯಕ. ಆತನ ಬಾಹ್ಯ ವೃತ್ತಿಗಳಿಗೆ ಇದು ಯಾವುದೇ ರೀತಿಯ ಬಾಧೆಯನ್ನೂ ಉಂಟು ಮಾಡುವುದಿಲ್ಲ.

ತಾನು ಯಾವ ವೃತ್ತಿಯನ್ನು ಕೈಗೊಂಡಿರುವನೋ ಆ ವೃತ್ತಿಯೇ ಶ್ರೇಷ್ಠ ಎಂದು ಭಾವಿಸಿ ಅದರಲ್ಲಿ ಸಂಪೂರ್ಣ ಮನಸ್ಸನ್ನು ತೊಡಗಿಸಿಕೊಳ್ಳುವುದಕ್ಕೂ ಗೀತೆ ನೆರವಾಗುತ್ತದೆ.

**ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್।**
**ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥**

*(೩-೩೫)*

'ಸರಿಯಾಗಿ ಆಚರಿಸದ ಪರಧರ್ಮಕ್ಕಿಂತ ಸ್ವಧರ್ಮವೇ ಮೇಲು. ಸ್ವಧರ್ಮದಲ್ಲಿ ಕೆಲವು ಲೋಪಗಳಿದ್ದರೂ ಪರಧರ್ಮವು ಭಯವನ್ನುಂಟುಮಾಡುತ್ತದೆ. ಸ್ವಧರ್ಮದಲ್ಲಿ ನಿಧನರಾದರೂ ಉತ್ತಮ.'

ನಮ್ಮ ಕೆಲಸಕ್ಕಿಂತ ಇನ್ನೊಬ್ಬರದು ಸುಲಭದ ಕೆಲಸ. ಅದರಲ್ಲಿ ಯಶಸ್ಸು ಸುಲಭ. ಅದನ್ನು ನಾನು ಪಡೆಯಬೇಕು ಎಂದು ಹಂಬಲಿಸಿ ತನ್ನ ಸ್ವಭಾವಕ್ಕೆ ವಿರುದ್ಧವಾದ ಕಾರ್ಯಗಳನ್ನು ಕೈಗೊಂಡು ಅದರಿಂದ ದುಃಖಪಡುವವರನ್ನು ಇಂದು ಎಲ್ಲೆಡೆ ಕಾಣುತ್ತಿದ್ದೇವೆ. ನಮ್ಮ ಸಹಜ ಸ್ವಭಾವಕ್ಕೆ ಒಗ್ಗುವ ಕಾರ್ಯಗಳಿಂದ ಸಿಗುವ ತೃಪ್ತಿ, ಯಶಸ್ಸು ಬಲವಂತವಾಗಿ ರೂಢಿಸಿಕೊಂಡ ಕಾರ್ಯಗಳಿಂದ ದೊರಕುವುದಿಲ್ಲ. ಹಾಗಾಗಿ ನಮಗೆ ದೊರಕಿರುವುದರಲ್ಲಿ ಸಂತೃಪ್ತಿಯನ್ನು ಕಾಣಬೇಕು ಎಂಬ ತಿಳಿವಳಿಕೆಯನ್ನು ಮೂಡಿಸುತ್ತದೆ ಗೀತೆಯ ಈ ನುಡಿ.

ಲೌಕಿಕರಾದ ಅನೇಕ ಗೃಹಸ್ಥರಿಗೆ ಒಂದು ಪ್ರಶ್ನೆ ಅಥವಾ ಸಂದೇಹ ಸರ್ವದಾ ಕಾಡುತ್ತಿರುತ್ತದೆ. ಸತ್ಕಾರ್ಯಗಳನ್ನು ಮಾಡಬೇಕು, ದೇವರನ್ನು ಪೂಜಿಸಬೇಕು. ಧರ್ಮಾಚರಣೆಯಲ್ಲಿ ತೊಡಗಬೇಕು ಎಂಬ ಆಸೆಯೇನೋ ಇರುತ್ತದೆ. ಆದರೆ ಸರಿಯಾದ

ಮಾರ್ಗ ತಿಳಿದಿರುವುದಿಲ್ಲ. ಶ್ರದ್ಧೆಯಿದೆ, ಆದರೆ ಶಾಸ್ತ್ರವಿಧಾನ ತಿಳಿದಿಲ್ಲ. ಹೀಗಿರುವಾಗ ನಾವು ಮಾಡುತ್ತಿರುವುದು ಸರಿಯೋ, ತಪ್ಪೋ ಎಂಬ ಗೊಂದಲ. ಇದಕ್ಕೆ ಸೂಕ್ತ ಉತ್ತರ ಭಗವಂತನ ಮಾತುಗಳಲ್ಲಡಗಿದೆ. ಶ್ರದ್ಧೆಯಿಂದ ಆಚರಿಸುವ ಕಾರ್ಯಗಳಿಗೆ ಫಲ ನಿಶ್ಚಯ. ಸಾತ್ವಿಕ, ರಾಜಸಿಕ, ತಾಮಸಿಕವೆಂಬ ಮೂರು ರೀತಿಯ ಶ್ರದ್ಧೆಗಳು ಜನರಲ್ಲಿ ಕಂಡುಬರುತ್ತವೆ. ಇಂದು ನಾವು ಸಮಾಜದಲ್ಲಿ ಕಾಣುವ ಎಲ್ಲ ವರ್ಗದ ಮನುಷ್ಯರ ನಡವಳಿಕೆಯನ್ನು ಭಗವಂತ ಅಂದೇ ತಿಳಿಸಿರುವನು.

ದೇವರನ್ನು ಪೂಜಿಸಿ ಸನ್ಮಾರ್ಗನಿರತರಾಗಿರುವವರು ಸಾತ್ವಿಕರು. ಐಶ್ವರ್ಯ, ಅಧಿಕಾರಗಳನ್ನು ಬಯಸುವವರು ರಾಜಸಿಕರು. ದ್ವೇಷ, ಮಾತ್ಸರ್ಯಗಳಿಂದ ಕೂಡಿ ಪರಹಿಂಸೆಯನ್ನು ಮಾಡುವವರು ತಾಮಸಿಕರು. ಇಂದು ಲೋಕದಲ್ಲಿ ಹಿಂಸೆ, ಅನ್ಯಾಯಗಳೇ ಹೆಚ್ಚಾಗುತ್ತಿವೆ, ತಾಮಸಿಕರೇ ಅಧಿಕವಾಗುತ್ತಿದ್ದಾರೆ ಎಂಬುದು ಎಲ್ಲರ ಅನುಭವಕ್ಕೆ ಬರುತ್ತಿರುವ ಕಟುಸತ್ಯ. ಹೀಗಾಗಲು ಕಾರಣವೇನಿರಬಹುದು? **‘ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ’** ಎನ್ನುತ್ತದೆ ದಾಸವಾಣಿ. ಹೊಟ್ಟೆ ಪಾಡಿಗಾಗಿಯೇ ದುಡಿಯುವುದು ಇಂದಿನ ಸಾಮಾನ್ಯ ಸಂಗತಿ. ಹೊಟ್ಟೆ ತುಂಬಲು ಆಹಾರ ಬೇಕು. ಆದರೆ ಆಹಾರ ಕೇವಲ ದೇಹಪೋಷಣೆಗೆ ಮಾತ್ರವಲ್ಲ. ನಾವು ತಿನ್ನುವ ಆಹಾರ ನಮ್ಮ ಸ್ವಭಾವವನ್ನೂ ರೂಪಿಸುತ್ತದೆ. ಆದ್ದರಿಂದ ಎಂತಹ ಆಹಾರವನ್ನು ಹೇಗೆ ಸೇವಿಸಬೇಕು ಎಂದು ಭಗವಂತನ ವಾಣಿ ನಮ್ಮನ್ನು ಎಚ್ಚರಿಸುತ್ತದೆ. ಧರ್ಮಮಾರ್ಗದಿಂದ ಆಹಾರವನ್ನು ಸಂಪಾದಿಸಬೇಕು. ಶುದ್ಧಮನಸ್ಸಿನಿಂದ ಕೂಡಿ, ಸಾತ್ವಿಕ ಆಹಾರವನ್ನು ನಿಯಮಿತವಾಗಿ ಸೇವಿಸಬೇಕು ಎಂದು ಉಪದೇಶಿಸುತ್ತದೆ ಗೀತೆ. ಸಾತ್ವಿಕ ಆಹಾರದ ಉತ್ಕೃಷ್ಟತೆಯನ್ನೂ ತಿಳಿಸುತ್ತದೆ ಗೀತೆ. ತಮ್ಮ ಮಕ್ಕಳು ಸತ್ಪ್ರಜೆಗಳಾಗಲು ಎಂತಹ ಆಹಾರವನ್ನು ನೀಡಬೇಕು ಎಂಬುದು ಗೃಹಸ್ಥರಿಗೆ ನೀಡಿರುವ ಮಹತ್ತರ ಸಂದೇಶ.

ಮನುಷ್ಯನಿಗೆ ದೊರಕಿರುವ ಮತ್ತೊಂದು ವಿಶೇಷವೆಂದರೆ ವಾಕ್‌ಶಕ್ತಿ. ಅದನ್ನು ಸಾರ್ಥಕಪಡಿಸಿಕೊಂಡು ಸಮಾಜಕ್ಕೆ ಹಿತವನ್ನುಂಟುಮಾಡುವ ರೀತಿಯೂ ಭಗವಂತನ ಉಪದೇಶದಲ್ಲಿ ವ್ಯಕ್ತವಾಗುತ್ತದೆ.

ಗೀತೆಯ ಒಂದೊಂದು ಮಾತೂ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಬೇಕಾದ ದಿವ್ಯಸಂದೇಶಗಳನ್ನೊಳಗೊಂಡಿದೆ. ಅಧ್ಯಾತ್ಮ ಸಾಧನೆಯನ್ನು ಮಾಡಬೇಕಾದರೆ ಎಲ್ಲವನ್ನೂ ತ್ಯಜಿಸಿ ಸಂನ್ಯಾಸಿಗಳಾಗಬೇಕಿಲ್ಲ. ಗೃಹಸ್ಥರಾಗಿದ್ದೂ ಸಂಸಾರ ಸಾಗರದಿಂದ ಹೇಗೆ ಪಾರಾಗಬಹುದು ಎಂಬ ಜ್ಞಾನವನ್ನು ಕಲಿಸುತ್ತದೆ ಗೀತೆ. ಶ್ರೀಕೃಷ್ಣ ತನ್ನದೇ ಉದಾಹರಣೆಯನ್ನು ತೋರಿದ್ದಾನೆ. ಗೃಹಸ್ಥನಿಗೆ ಭಕ್ತಿಮಾರ್ಗ ಅತ್ಯಂತ ಸುಲಭ. ನಾವು ಯಾವುದೇ ಸ್ಥಿತಿಯಲ್ಲಿದ್ದರೂ ಭಗವದ್ಭಕ್ತಿ, ಶರಣಾಗತಿ ಕಷ್ಟವಾಗುವುದಿಲ್ಲ. ತಾನು ಯಾವ ಕರ್ತವ್ಯವನ್ನು ಮಾಡಬೇಕಾಗಿದೆಯೋ ಅದನ್ನು ನಿಷ್ಠೆಯಿಂದ ಆಚರಿಸುತ್ತಾ, ಅದು ಭಗವಂತನ ಸೇವೆ ಎಂಬ ಭಾವವನ್ನು ಹೊಂದಿ, ಅದರಿಂದ ತನಗೆ ದೊರಕುವ ನೋವು ನಲಿವುಗಳೆಲ್ಲವೂ ಭಗವದರ್ಪಣ ಎಂಬ ಶ್ರದ್ಧೆಯನ್ನು ಹೊಂದಿರುವ ಗೃಹಸ್ಥನೇ ಶ್ರೇಷ್ಠ. ಇದರೊಡನೆ ಜ್ಞಾನವೂ ಸೇರಿದರೆ ಭಗವಂತನಿಗೆ ಅತ್ಯಂತ ಪ್ರೀತಿಪಾತ್ರರಾಗುತ್ತೇವೆ. ಇಂತಹ ಭಕ್ತರ ಉದ್ಧಾರ ಭಗವಂತನ ಜವಾಬ್ದಾರಿಯೇ ಆಗಿರುತ್ತದೆ. ಹೀಗೆ ಗೃಹಸ್ಥನಿಗೆ ಅತ್ಯಂತ ಸುಲಭವಾದ ಮಾರ್ಗವನ್ನು ಕೃಪೆಯಿಂದ ಭಗವಂತನು ತೋರಿಸಿಕೊಟ್ಟಿರುವನು. ಗೃಹಸ್ಥನಿಗೆ ಭಗವಂತನ ನಾಮಸ್ಮರಣೆಯೇ ಜಪ. ನಿತ್ಯ ಮಾಡುವ ಕರ್ಮಗಳೇ ಆತನ ಕೈಂಕರ್ಯ. ತನ್ನ ಸುತ್ತ ಇರುವವರೆಲ್ಲ ಭಗವಂತನ ಪರಿವಾರ. ಎಲ್ಲ ಕರ್ಮಗಳ ಫಲವೂ ಆತನಿಗೇ ಸೇರುವುದು. ಇಂತಹ ಶ್ರದ್ಧೆಯಿಂದ ತನಗೆ ದೊರಕಿರುವ ಜೀವನ ವನ್ನು ಉತ್ತಮಪಡಿಸಿಕೊಳ್ಳುತ್ತಾ, ವ್ಯಾಮೋಹಗಳನ್ನು ಮೀರುತ್ತಾ, ಸಚ್ಚಿಂತನೆಗಳನ್ನು ಮಾಡುತ್ತಾ, ನಿಸ್ವಾರ್ಥಕಾರ್ಯಗಳಲ್ಲಿ ತೊಡಗುತ್ತಾ, ದೊರಕಿರುವ ಎಲ್ಲವೂ ಭಗವಂತನ ಪ್ರಸಾದ ಎಂಬ ವಿನೀತ ಭಾವದಿಂದ ಸ್ವೀಕರಿಸುತ್ತಾ, ಎಲ್ಲ ಕರ್ಮಫಲಗಳನ್ನೂ ಆತನಿಗೇ ಅರ್ಪಿಸಿ, ಭಗವಂತನಿಗೆ ಶರಣಾದರೆ ಅಂತಹ ಗೃಹಸ್ಥನ ಬಾಳು ಸರ್ವಶ್ರೇಷ್ಠವೆನಿಸುವುದರಲ್ಲಿ ಯಾವುದೇ ಸಂದೇಹವಿಲ್ಲ.

ಅಧ್ಯಾತ್ಮದ ಉತ್ತುಂಗದಲ್ಲಿ ನಿಂತು ಮುಮುಕ್ಷುಗಳಿಗೆ ಸಾಧಕರಿಗೆ ಅಗತ್ಯವಾದ ಮಾರ್ಗದರ್ಶನವನ್ನು ನೀಡಿದ ಭಗವಂತ ಸಾಮಾನ್ಯ ಗೃಹಸ್ಥರನ್ನೂ ಮರೆತಿಲ್ಲ. ಅವರಿಗೂ ಮೋಕ್ಷದ ಹಾದಿ ಸುಲಭವಾಗಿದೆ ಎಂಬುದನ್ನು ಅತ್ಯಂತ ಸರಳವಾಗಿ, ಸ್ಪಷ್ಟವಾಗಿ ತಿಳಿಸಿರುವನು. ನಾವು ತಿನ್ನುವ ಆಹಾರ, ನುಡಿಯುವ ಮಾತು, ಪೂಜಿಸುವ ಕ್ರಮ, ಬದುಕುವ ರೀತಿ ಹೀಗೆ ಪ್ರತಿಯೊಂದು ಅಂಶದಲ್ಲೂ ನಮ್ಮ ಕೈಹಿಡಿದು ಮುನ್ನಡೆಸುತ್ತಿರುವ ಆ ಭಗವಂತನ ಕರುಣೆಗೆ ಮಿತಿಯುಂಟೆ? ಗೀತೆಯ ಒಂದೊಂದು ನುಡಿಯೂ ಅಮೃತಪ್ರಾಯವಾಗಿದೆ. ಅದನ್ನು ಸವಿಯುತ್ತಾ ಆತ ತೋರಿದ ಹಾದಿಯಲ್ಲಿ ಮುನ್ನಡೆದು ಭವಬಂಧನದಿಂದ ಪಾರಾಗಿ ಮುಕ್ತಿ ಪಥದೆಡೆಗೆ ಸಾಗುವುದೇ ನಮ್ಮ ಶ್ರೇಯಸ್ಸಿನ ಮಾರ್ಗ.

**ನೃದೇಹಮಾದ್ಯಂ ಸುಲಭಂ ಸುದುರ್ಲಭಂ**
**ಪ್ಲವಂ ಸುಕಲ್ಪಂ ಗುರುಕರ್ಣಧಾರಮ್ ।**
**ಯದಾನುಕೂಲೇನ ನಭಸ್ವತೇರಿತಂ**
**ಪುಮಾನ್ ಭವಾಬ್ಧಿಂ ನ ತರೇತ್ ಆತ್ಮಹಾ ॥**

‘ಮನುಷ್ಯದೇಹವನ್ನು ಹೊಂದುವುದು ಬಹಳ ಕಷ್ಟ. ಅದೇ ಒಳ್ಳೆಯ ದೋಣಿ. ಅದಕ್ಕೆ ಗುರುವೇ ಅಂಬಿಗ.(ಪರಮಾತ್ಮನೆಂಬ) ಅನುಕೂಲವಾದ ಗಾಳಿಯಿಂದ ನಡೆಸಲ್ಪಡುತ್ತಿರುವಾಗ ಮನುಷ್ಯನು ಸಂಸಾರಸಾಗರವನ್ನು ದಾಟದೇ ಇದ್ದರೆ ಅವನು ತನ್ನನ್ನೇ ಕೊಲೆ ಮಾಡಿಕೊಂಡಂತೆ.’ — *ಭಾಗವತ*